ಶ್ರೀ ಎಸ್. ಆರ್. ಬೊಮ್ಮಾಯಿ.—ಅನೇಕ ಶ್ರೀಮಂತರು, ತಾಹಸೀಲ್ದಾರರ ಮೇರೆ ಅರ್ಜಿಸ್ಸು ಬೀರಿ, ತಪ್ಪು ಸರ್ಟಿಫಿಕೇಟ್ ತೆಗೆದುಕೊಂಡು ಲಾಭ ಇದರಿಂದ ಪಡೆಯುತ್ತಿದ್ದಾರೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಏ. ಶಂಕರಗೌಡ.—ಅಂಥ ಯಾವ ವರದಿಯೂ ಸರ್ಕಾರಕ್ಕೆ ಬಂದಿಲ್ಲ.

Damage due to Feeder Halla of Kallambella Tank

786. **Sri B. GANGANNA** (Kallambella).—

Will the Minister of State for Minor Irrigation be pleased to state:—

(*a*) whether the feeder halla of Kallambella Tank is causing heavy damage to the lands on both sides during rainy season every year;

(*b*) whether the atchkatdars on both sides of the halla have represented to Government to provide immediate flood damage relief to them and also provide for permanent protective measures?

Sri D. PARAMESHWRAPPA (Deputy Minister for Major Irrigation and Electricity) [On behalf of Sri A. J. DODDAMETI (Minister of State for Minor Irrigation)].—

(*a*) The matter is under investigation.

(*b*) Yes.

ಶ್ರೀ ಬಿ. ಗಂಗಣ್ಣ.- ಉತ್ತರದಲ್ಲಿ ತನಿಖೆ ನಡೆಸರಾಗುತ್ತಿದೆ ಎಂದು ಹೇಳಿದ್ದೀರಿ. ಆದ್ದರಿಂದ ಇದನ್ನು ಆದಷ್ಟು ಜಾಗ್ರತೆಮಾಡಲು, ತನಿಖೆ ರಿಪೋರ್ಟು ಆದಷ್ಟು ಜಾಗ್ರತೆ ತರಿಸಿಕೊಂಡು, ಖಾಯಂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಈ ವರ್ಷ ಮನಸ್ಸು ಮಾಡುತ್ತೀರಾ ?

† ಶ್ರೀ ಡಿ. ಪರಮೇಶ್ವರಪ್ಪ.—ಈ ಬಗ್ಗೆ ಎಕ್ಸುಕ್ಯೂಟಿವ್ ಇಂಜಿನಿಯರಿಂದ ವರದಿ ತರಿಸಿಕೊಂಡು, ಹಾಗೆ ಏನಾದರೂ ಡ್ಯಾಮೇಜ್ ಆಗುತ್ತಿದ್ದರೆ, ಅದಕ್ಕೆ ಸರಿಯಾದ ಪ್ರೊಟೆಕ್ಟಿವ್ ಕೆಲಸ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಗಂಗಣ್ಣ.—ರೈತರು ತಮಗೆ, ತಕ್ಷಣ ಪರಿಹಾರವನ್ನು ಒದಗಿಸಬೇಕು, ಜಮೀನು ಗಳಿಗೆ ಉಂಟಾಗಿರತಕ್ಕ ನಷ್ಟಗಳನ್ನು ತರಿದೂಗಿಸಬೇಕೆಂದು ಮನವಿ ಮಾಡಿಕೊಂಡಿರುವರೇ ಎಂದು ಕೇಳಿದ್ದಕ್ಕೆ, ಹೌದು ಎಂದು ಹೇಳಿದ್ದೀರಿ. ಅಲ್ಲಿ ನೆರೆಹಾವಳಿಯಿಂದ ಮೂರು ನಾಲ್ಕು ಅಡಿ ಮಣ್ಣು ತೋಟದಲ್ಲೆಲ್ಲಾ ತುಂಬಿ ತೊಂದರೆಯಾಗಿದೆ. ಈಗಾಗಲೇ ಮಳೆಗಾಲ ಪ್ರಾರಂಭವಾಗುವುದರಲ್ಲಿದೆ. ಆದ್ದರಿಂದ ಅದನ್ನು ತೀವ್ರವಾಗಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಇದರಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸಿವೆ. ಎಲ್ಲೆಲ್ಲಾ ಹೂಣು ಹೆಚ್ಚಾಗಿದೆ, ಅದನ್ನು ತೆಗೆಯುವ ಅವಶ್ಯಕತೆ ಇದೆ. ಅದನ್ನು ಪರೀಕ್ಷೆ ಮಾಡಿ, ಮಾಡಬೇಕಾಗುತ್ತದೆ. ಮತ್ತು ಮಾರ್ಜಿನಲ್ಲಿರತಕ್ಕಂತಹ ಜಮೀನುಗಳನ್ನು ಎನ್‌ಕ್ರೋಚ್ ಮಾಡಿದ್ದಾರೆ. ಅದನ್ನು ಖುದ್ದಾಗಿ ಪರಿಶೀಲನೆ ಮಾಡಿ ರಿಪೋರ್ಟು ಕಳುಹಿಸುವುದಕ್ಕೆ ಎಕ್ಸುಕ್ಯೂಟಿವ್ ಇಂಜಿನಿಯರಿಗೆ ಬರೆದಿದ್ದೇವೆ. ಅದು ಸದ್ಯದಲ್ಲಿಯೇ ಬರುವುದರಲ್ಲಿದೆ.